ವಿಷಯ: ಬಾದಾಮಿ ತಾಲ್ಲೂಕು ಕೆರೂರು ಪಟ್ಟಣಕ್ಕೆ ಐ.ಡಿ.ಎಸ್.ಎಮ್.ಟಿ. ಯೋಜನೆ.

2543 (3542)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕು ಕೆರೂರು ಪಟ್ಟಣ ಬಹಳ ವರ್ಷಗಳಿಂದ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೇಂದ್ರ ಸರ್ಕಾರದ ನೆರವಿನ ಯೋಜನೆಯಾದ ಐ.ಡಿ.ಎಸ್.ಎಂ.ಟಿ. ಯೋಜನೆಯ ಮೂಲಕ ಪಟ್ಟಣದ ಅಭಿವೃದ್ಧಿ ಕೈಗೆತ್ತಿಕೊಳ್ಳಲು ಮುಖ್ಯ ಮಂತ್ರಿಗಳು ಶಿಫಾರಸ್ಸು ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರಕಾರವು ಯಾವಾಗ ನಿರ್ಧಿಷ್ಟವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಬಂದಿದೆ.

ಇ) ರಾಜ್ಯಮಟ್ಟದ ಆಯ್ಕೆ ಸಮಿತಿ ಕೆರೂರು ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ. ಯೋಜನೆ ಅಡಿ ಆಯ್ಕೆ ಮಾಡಿದ ನಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದ ನಂತರ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ವಿಷಯ: ವಿಜಾಪುರ ಜಿಲ್ಲೆಯಲ್ಲಿರುವ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವಸತಿಶಾಲೆಗಳು.

2544 (3543)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಾವುವು?

ಆ) ಬಾದಾಮಿಯಲ್ಲಿ ವಸತಿಶಾಲೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ವಿಜಾಪುರ ಜಿಲ್ಲೆಯಲ್ಲಿ ಹಿಂದುಳಿದ ವರ್ಗದ ಮತ್ತು ಅಲ್ಪಸಂಖ್ಯಾತರ ಇಲಾಖೆಯ 2 ನವೋದಯ ಮಾದರಿ ವಸತಿಶಾಲೆಗಳು ಇಂಡಿ ತಾಲ್ಲೂಕಿನ ಹೊರ್ತಿ ಮತ್ತು ಮುಧೋಳ ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆ) ಇಲ್ಲ.

ವಿಷಯ: ಧಾರವಾಡ ಹುಬ್ಬಳ್ಳಿ ಮಹಾನಗರ ಸಭೆ ವ್ಯಾಪ್ತಿಯಲ್ಲಿರುವ ಪೈಪ್‌ಲೈನಿನಲ್ಲಿ ನೀರು ಸೋರುವಿಕೆ.

2545 (3617)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಗ್ರಾಮೀಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ-ಹುಬ್ಬಳ್ಳಿ ಮಹಾನಗರ ಸಭೆಯ ಜನರಿಗೆ ನೀರು ಒದಗಿಸುತ್ತಿರುವ ಮಲಪ್ರಭಾದ ನೀರು ಸವದತ್ತಿಯಿಂದ ಧಾರವಾಡದವರೆಗೆ ಪೈಪಲೈನ್ ಮೂಲಕ ಬರುತ್ತಿರುವುದು ನಿಜವೇ? ಹಾಗಾದರೆ ಈ ಪೈಪ್‌ಲೈನ್ ಯಾವ ವಿಧಾನದ ತಾಂತ್ರಿಕ ಅನುಭವದಿಂದ ಜೋಡಿಸಲಾಗಿದೆ ತಿಳಿಸುವುದು.

ಆ) ಯಾವ ವರ್ಷದಿಂದ ನೀರು ಮಹಾನಗರಸಭೆಗೆ ಪೂರೈಸಲು ಪ್ರಾರಂಭಿಸಲಾಯಿತು, ಅಂದಿನಿಂದಲೂ ಪೈಪ್ ಲೈನಿನ ನೀರು ಭೂಮಿಯಲ್ಲಿ ಸೋರಿಕೆ ಉಂಟಾಗಿರುವ ಕಾರಣ ಏನು ಎಂಬುದನ್ನು ಸರ್ಕಾರ ಗುರುತಿಸಿದೆಯೇ? ಹಾಗಾದರೆ ಯಾವ ಉಪಾಯ ಅನುಸರಿಸುತ್ತಿದೆ.

ಇ) ನೀರು ಪ್ರಾರಂಭಿಸಿದ ವರ್ಷದಿಂದ ಈ ವರೆಗಿನ ಪ್ರತಿವರ್ಷದ ಸೋರಿಕೆಗಳು ಎಷ್ಟು? ಅವುಗಳಲ್ಲಿ ಖರ್ಚು ಮಾಡಿದ ಹಣವೆಷ್ಟು?

ಈ) ಮೇಲಿನ ಸೋರುವಿಕೆ ರಿಪೇರಿ ಮಾಡಿದ ಅದೇ ಸ್ಥಳದಲ್ಲಿ ಎಷ್ಟು ಲೀಕೇಜ್‌ಗಳು ಕಂಡು ಬಂದಿದೆ. ಈವರೆಗೆ ಖರ್ಚುಮಾಡಿದ ರಿಪೇರಿ ಖರ್ಚು ವೆಚ್ಚದ ಹಣದ